ಯಾರಾದ್ರು ಜ್ವರ ಬಂದಿರೊ ಮಕ್ಕಳವರೇನೋ?' ಎಂದು ಕೇಳುವವಳನ್ನ 'ಕೂತ್ಕಳಮ್ಮ ಜಯ ಈ ಚೇರಿರೋದ್ಯಾಕಮ್ಮ?' ಎಂದು ಒತ್ತಾಯ ಮಾಡಿ ಕೂರಿಸಿಕೊಂಬುತ್ತಾರೆ. ಊರಲ್ಲಿನ ಲಾರ್ವಾ ಪತ್ತೆಯಲ್ಲಿ ಜಯಮ್ಮನ ಪಾತ್ರದ ಬಗ್ಗೆ ಡೇಂಗ್ಯೂ ಕೇಸುಗಳ ದೃಢೀಕರಣದ ಬಗ್ಗೆ ಮೇಡಮ್ಮನ ಇಸ್ಕೂಲಿನಲ್ಲಿ ಜ್ವರವಿರುವ ಇಲ್ಲದಿರುವ ಖಾತ್ರಿಯ ಬಗ್ಗೆ, ಗೈರಾಗಿರುವ ಮಕ್ಕಳ ಹಿನ್ನಲೆಯ ಬಗ್ಗೆ, ಇತಿಂತ ಚರ್ಚೆಯಲ್ಲಿ ಮೇಡಮ್ಮುಬ್ಬೊಳಿಂದ ಜಯಮ್ಮನಿಗೆ ಗೌರವ ಸಿಗುತ್ತೈತೆಂಬ ನಂಬಿಕೆಯಲ್ಲಿ ಅವಳನ್ನವಳು ಆಗಾಗ ಸಂತೈಸಿಕೊಂಬುತ್ತಿದ್ದಾಳೆ.

ಊರಲ್ಲಿ ಕೆಲವು ಕಡೆ ಇವಳು ಏತಿ ಅಂದರೆ ಪ್ರೇತಿ ಎಂಬುವವರ ನಡುವೆ ಅವಳ ವೃತ್ತಿಯನ್ನು ಬಿಡದೆ ಒದ್ದಾಡುತ್ತಿರುವ ಜಯಮ್ಮ, ಎಡ್ ಮೇಡಮ್ಮುನತ್ತಿರ ಯಾವ ಋಣಾನುಬಂಧವೋ ಏನೊ? ಅವಳಿಗಾಗುವ ಬಾಧಿತ ಅಬಾಧಿತ ಸವಾಲುಗಳೆಲ್ಲವನ್ನು ಹೇಳಿಕೊಂಬುವ ಈಹೊತ್ತಿನಲ್ಲಿ. ಮೇಡಮ್ಮನಿಗೆ ಜಯಮ್ಮನ ಹೋರಾಟದ ಬಗ್ಗೆ ಅನುಕಂಪವಿದೆ. ಈ ಡೇಂಗ್ಯು ಜ್ವರದ ಸವಾಲುಗಳ ನಡುವಿನಲ್ಲಿ ಮೇಡಮ್ಮುಗೊಂದು ತಲೆನೋವಿಡುತ್ತಿದ್ದ ರಿತಿಕ್ ಎಂಬ ವಿದ್ಯಾರ್ಥಿಯ ಕಥೆಯೊಂದನ್ನು ಹೇಳೀರು; 'ಅಲ್ಲಕಣೆ ಜಯ, ಪ್ರಾರ್ಥನಾ ಸಮಯದಲ್ಲಿ ನೋಡ್ರಪ್ಪ ನಿಮ್ಮ ನಿಮ್ಮ ಮನೆಮುಂದೆ ಎಲ್ಲು ನೀರ್ ನಿಂತಕಳದಂಗೆ ನೋಡಕಳಾಕೆ ಮನೇಲಿ ನಿಮ್ಮ ಅಪ್ಪ ಅಮ್ಮುಂಗೆ ಹೇಳ್ ಬುಡಿ. ಯಾಕಂದ್ರೆ ಕಾಯಿಚಿಪ್ಪು ಕಾಯಿಮಟ್ಟೆಲಿ ಹಂಡೆ ತೊಟ್ಟಿ ಸೊಂಪುಗಳಲ್ಲಿ ಹಳೆಯ ನೀರಿನಲ್ಲಿ ಹುಳಾ ಬಿದ್ದಿರ್‌ತ್ತಾವೆ. ನಿಮ್ಮನೆಯಲ್ಲಿ ಹೇಳ್ರಿ, ಜಾಸ್ತಿದಿನ ಹಳೆ ನೀರು ತುಂಬಿಟ್ಟುಕೊಬಾರ್ದಂತ ಅದ್ರೊಳಗೆಲ್ಲ ಹುಳಾ ಬಿದ್ದಿರ್‌ತ್ತಾವೆ. ಅವೆ ಲಾರ್ವಹುಳ ಅವು ಸೊಳ್ಳೆಯಾದ್ ಮೇಲೆ ಕಚ್ಚಿ ಬಿಟ್ಟರೆ ನಮಗೆ ಜ್ವರ ಬರ್ ತ್ತಾವಂತ ನಿಮ್ಮನಿಮ್ಮ ಮನೇಲೆಲ್ಲ ಹೇಳತಾ ಇರಿ. ಅಂತ ಹುಳಾ ಬಿದ್ದಿರೋ ನೀರೇನಾದ್ರು ನೋಡಿದರೆ ಕೂಡ್ಲೆ ಚೆಲ್ಲಸ್ ಬುಡ್ರಿ...' ಎಂದು ದಿನವು ಪ್ರಾರ್ಥನಾ ಸಮಯದಲ್ಲಿ ಹೇಳಿದ ಮಾತು ಕಟ್ಟಿಕೊಂಡು ಈ ಮೂರನೆ ತರಗತಿ ಹುಡುಗ ರಿತಿಕ್ ಎಂಬೋನು ಸಂಜೆ ಇಸ್ಕೂಲಿನಿಂದ ಮನೆಗೋದ್ ಮ್ಯಾಲೆ ಸುಮ್ಮನಿರಲಾರದೆ. ಎಲ್ಲರ ಮನೆಮನೆಗಳ ತೊಟ್ಟಿ ಸೊಂಪುಗಳನ್ನ ಗಂಟಗಟ್ಟಲೆ ಇಣುಕಿ ಇಣುಕಿ ನೋಡೋದೆ ಅವನ ಕೆಲಸವಾಯಿತಂತೆ. ಇಸ್ಕೂಲು ಬಿಟ್ಟರೆ ಮನೆ ಸೇರ್‌ತಿರಲಿಲ್ಲ, ಬುಕ್ಕು ತಗೀತಿರಲಿಲ್ಲವೆಂದು. ನೆನ್ನೆ ದಿನ ರಿತಿಕನ ಅಪ್ಪಆಪೀಸ್ ರೂಮಿನ ವೊಸಲಿನ ತನಕ ಬಂದು, ಮೇಡಮ್ಮನವರೆ ನಮ್ಮ ರಿತಿಕನಿಗೆ ಓಮ್‌ವರ್ಕ್ ಬರಿಯಾಕೇಳೀದ್ದೀರೋ ಇಲ್ಲ, ಮನೆಮನೆಗಳ ತೊಟ್ಟಿ ಸೊಂಪು ಬಗ್ಗಿ ನೋಡಾಕೇಳಿದ್ದೀರೊ? ಅನುತ ಗುರಾಯಿಸಿಕೊಂಡು ನೋಡತ್ತಾನಲ್ಲೆ. ನೋಡು ಮೇಡಮ್ಮ ನೀನು ನೆಟ್ಟಗೆ ಪಾಠ ಮಾಡೀರೆ ಸರಿ ಇಲ್ಲಾ ಅಂದ್ರೆ ನಾನ್ ತಲೆಕೆಟ್ ನನ್ ಮಗ, ನನ್ ಕಥೆ ನಿನಗ್ ಗೊತ್ತಿಲ್ಲ. ಆಫೀಸಿಗೆ ಅರ್ಜಿ ಕೊಟ್ಟು ನಿನ್ನೇನ್ ಮಾಡ್ಬೇಕಂತ ನನಗೆಲ್ಲ ಗೊತ್ತೈತೆ ಎಂದು ಗಡತ್ತಾಗೆ ಕುಡುದು ಬಂದವನ ಮಾತು ಬಾಯಲ್ಲಿ ಭರತನಾಟ್ಯವಾಡುತ್ತಿತ್ತು. ಆ ನಾಟ್ಯದ ಮಾತುಗಳಿಂದಲೆ ನನ್ನನ್ನ ಆವಯ್ಯ ಇನ್ನು ಏನೇನೊ ಕೆಟ್ಟ ಮಾತಲ್ಲೆ ಬೈದವನೆ ಕಣೆ ಜಯ' ಎಂದ ಎಡ್ ಮೇಡಮ್ಮನ ಬ್ಯಾಸರಿಕೆಯ ಕಥೆ ಕೇಳಿದ ಜಯಮ್ಮ ಹೊಟ್ಟೆ ಹುಣ್ಣಾಗುವಂತೆ ನಕ್ಕು ಬಿಟ್ಟಳು. ನಗುವಾಗ ರಿತಿಕನಮುಖವನ್ನ ಒಂದುಸಲ ನೋಡುತ್ತಾಳೆ ಮೇಡಮ್ಮನ ಮುಖವನ್ನ ಒಂದುಸಲ ನೋಡುತ್ತಾಳೆ ತೇಲುಗಣ್ಣು ಮಾಲುಗಣ್ಣಿನೊಳಗೆ. ಎದಿಯಾಗಿನಿಂದ ಗುದ್ದಿಕೊಂಡು ಬಂದ ನಗುವಿಗೆ ಪಕಪಕನೆ ನಕ್ಕು ಎಷ್ಟು ತಡಕೊಂಡ್ರು ಕಂಟ್ರೋಲಿಗೆ ಸಿಗದಂತ ನಗುವಿನಲ್ಲಿ ಅವಳ ಈಸುದಿನದ ಎದೆಭಾರವೆಲ್ಲ ಕರಗಿದಂತಾಯಿತು. ಇಂತ ಮನಸಾರೆಯಂತ ನಗುವ ನಕ್ಕು ಏಸೊ ದಿನಗಳಾಗಿದ್ದ ಹೊತ್ತಿನಲ್ಲಿ ನಕ್ಕು ನಕ್ಕು ಸುಧಾರಿಸಿಕೊಂಡ ಜಯಮ್ಮನಿಗೆ ಕಣ್ಣಾಗಿನ ನೀರು ಎಷ್ಟೊತ್ತಾದರು ಅವಾಗವೆ ಜಿನುಗುತ್ತಲೇ ಇದ್ದವು. 'ಮೇಡಮ್ಮನವರೆ ನನ್ನ ಬೇಜಾರಿನ ಮುಂದೆ ನಿಮ್ಮ ಬೇಜಾರು ಏನಿಲ್ಲ ಬಿಡಿ, ಅಂತೋರಿಗೆಲ್ಲ ತಲೆಕೆಡಿಸಕಾ ಬ್ಯಾಡಿ' ಅಂತೇಳಿದ ಜಯಮ್ಮ ಇಸ್ಕೂಲಿನಿಂದ ಎದ್ದು ಬಂದಿದ್ದಳು.

ಈಗೀಗ ಊರಲ್ಲಿ ಜ್ವರದ ಕೇಸುಗಳು ಪತ್ತೆಯಾಗಿರುವ ಈ ಊರಿಗೆ ಜಯಮ್ಮನ ಜೊತಿಗೆ ಇನ್ನಿಬ್ಬರು ಗುಲಾಬಿಬಣ್ಣದ ಆಶಾ ಕಾರ್ಯಕರ್ತೆಯರು ಜೊತೆಯಾಗಿ ಬಂದರು. ಈ ಮೂವರು ಸಂದಿ